






ಬಿಸಿ ಗಾಳಿಯ ಬಲೂನ್ ಮೂಲಕ ಕಪಡೋಕಿಯಾದ ಆಶ್ಚರ್ಯಕರ ಭೂದೃಶ್ಯವನ್ನು ಆಗಸದಿಂದ ನೋಡುವುದೇ ಒಂದು ಸೊಗಸು. ಸಮುದ್ರ ಮಟ್ಟದಿಂದ 1,000 ಮೀಟರ್ ಎತ್ತರದಲ್ಲಿರುವ ಲಂಬವಾಗಿ ನಿಂತಿರುವ ಜ್ವಾಲಾಮುಖಿ ಗೋಪುರಗಳನ್ನು ಭೇದಿಸಿ, ಕಪಡೋಕಿಯಾದ ಕಣಿವೆಗಳ ಮೂಲಕ ಹಾರುತ್ತಾ, ಕಲ್ಲಿನ ರಚನೆಗಳು, ಜ್ವಾಲಾಮುಖಿ ಬಂಡೆಗಳ ಗೋಪುರಗಳು, ಕಲ್ಲುಗಳಲ್ಲಿ ಕೆತ್ತಿದ ಚರ್ಚುಗಳು, ಗುಹಾ ಮನೆಗಳು, ಹಕ್ಕಿಗಳು ರಚಿಸಿಕೊಂಡ ಗೂಡುಗಳು ಮತ್ತು ಪ್ರಸ್ಥಭೂಮಿಯ ಭೂಪ್ರದೇಶದ ಸುಂದರ ದೃಶ್ಯಾವಳಿಯ ಒಂದು ಅಸಾಧಾರಣ ನೋಟ ಕಾಣಬಹುದಾಗಿದೆ. ಶಿಲೆಗಳು ಅಲೆ ಅಲೆಯಾಗಿ ತೇಲಿಬರುವಂತೆ ಕಣ್ಣಿಗೆ ಗೋಚರಿಸುತ್ತವೆ.

ಪೈಲಟ್, ತನ್ನ ಹಾರಾಟದ ವಿಚಿತ್ರ ಅನುಭವಗಳು, ತಮಾಷೆಯ ಪ್ರಸಂಗಗಳು, ಮೇಲಿನಿಂದ ಕಾಣುವ ವಿಚಿತ್ರ ಆಕೃತಿಗಳಿಗೆ ಆತ ಇಟ್ಟ ವಿಚಿತ್ರ ಹೆಸರುಗಳನ್ನು ಹೇಳುತ್ತಾ 800ರಿಂದ 1000 ಮೀಟರ್ ಎತ್ತರದಲ್ಲಿ ಬಲೂನ್ ಹಾರಾಟ ನಡೆಸುತ್ತಾನೆ. ಆಗಸದಲ್ಲಿ ಗಾಳಿಪಟಗಳಂತೆ ಹಾರುತ್ತಿರುವ ಇತರ ಬಣ್ಣಬಣ್ಣದ ಬಲೂನ್‌ಗಳ ನಡುವೆ ನಮ್ಮದೂ ಸಾಗುತ್ತದೆ. ಕ್ಷಣಕ್ಷಣಕ್ಕೂ ಬದಲಾಗುವ ದೃಶ್ಯಾವಳಿಗಳನ್ನು ವಿವಿಧ ಕೋನಗಳಲ್ಲಿ ಕ್ಲಿಕ್ಕಿಸುತ್ತಾ ಪ್ರವಾಸಿಗರು ಸಂಭ್ರಮಿಸುವರು.

ಹಾರಾಟದಲ್ಲಿ ಒಂದು ಗಂಟೆ ಕಳೆಯುವುದೇ ತಿಳಿಯುವುದಿಲ್ಲ. ಹಾರಾಟದ ನಂತರ ಪೈಲಟ್ ಚಾಕಚಕ್ಯತೆಯಿಂದ ಬುಟ್ಟಿಯನ್ನು ಅವರ ಕಂಪನಿಯ ವಾಹನದ ಟ್ರೈಲರ್ ಮೇಲೆ ಇಳಿಸುತ್ತಾನೆ. ಬುಟ್ಟಿ ಬೀಳದಂತೆ ಹಗ್ಗವನ್ನು ಹಿಡಿದು ಕಟ್ಟಲು ಸಹಾಯಕರಿರುತ್ತಾರೆ. ನಾವೆಲ್ಲಾ ಇಳಿದ ಮೇಲೆ ಗಾಳಿಯ ತಾಪಮಾನವನ್ನು ನಿಧಾನಕ್ಕೆ ಕಡಿಮೆ ಮಾಡುತ್ತ ಬಂದು ಬಲೂನನ್ನು ಇಳಿಸಿ ವಾಹನದಲ್ಲಿ ತುಂಬುತ್ತಾರೆ.

ಸ್ಥಳದಲ್ಲೇ ಮೇಜನ್ನಿಟ್ಟು ಹಣ್ಣಿನ ರಸ, ವೈನ್, ಶಾಂಪೇನ್ ನೀಡಿ ಪ್ರಯಾಣಿಕರನ್ನು ಸತ್ಕರಿಸಿ, ಪ್ರಯಾಣದ ಸುಂದರ ಪ್ರಮಾಣಪತ್ರವನ್ನು ಸಹ ನೀಡುತ್ತಾರೆ. ಪ್ರತಿಯೊಬ್ಬರೂ ತಮ್ಮ 'ಬಕೆಟ್ ಲಿಸ್ಟ್'ಗೆ ಸೇರಿಸಲೇಬೇಕಾದ್ದು ಕಪಡೋಕಿಯಾದ 'ಹಾಟ್ ಏರ್ ಬಲೂನ್' ಅನುಭವ!